**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಉಪವಿಭಾಗ-2ರ ಕಛೇರಿ
ಚಾವಿಸನಿನಿ, ಕೆ.ಆರ್.ಪೇಟೆ-571426
Telephone No: 08230262239

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Subdivision-2 Office,
CESC, K R Pet-57142
**Web Site:cescmysore.karnataka.gov.in**
**E-mail ID:aeekrpet2@cescmysore.org**
Company Identity Number[CIN]:-U40109KA2004SGC035177

ಕ್ರಮಾಂಕ:ಸಕಾನಿಇಂ(ವಿ)/ಸೆಸ್ಕ್/ಕೆ.ಆರ್.ಪೇಟೆ-2/2022-23/ 1103-1104 ದಿನಾಂಕ: 20/12/2022

ಗೆ,
ರಾಮೇಗೌಡ ಬಿನ್ ದೊಡ್ಡೇಗೌಡ
ಕುಂದೂರು

ಮಾನ್ಯರೇ,

**ವಿಷಯ:** KNRLBJL-1164 ರ ವಿದ್ಯುತ್ ಸ್ಥಾವರದ ಬಾಕಿ ಮೊತ್ತವನ್ನು ಪಾವತಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಸ್ಥಾವರ ಸಂಖ್ಯೆ KNRLBJL-1164 ರಾಮೇಗೌಡ ಬಿನ್ ದೊಡ್ಡೇಗೌಡ ರವರಿಗೆ ಸೇರಿದ್ದು, ಈ ಸ್ಥಾವರದ ಬಾಕಿ ಮೊತ್ತ ರೂ.2012.00ಗಳಿದ್ದು ಸದರಿ ಬಾಕಿಯನ್ನು ಪಾವತಿಸಲು ದಿನಾಂಕ 17.09.2022ರಂದು ಕರಾರು ಪತ್ರ ರದ್ದತಿಗೆ ನೋಟಿಸ್ ನೀಡಿದ್ದು, ಈ ನೋಟಿಸ್ ನೀಡಿದ ಮೂರು ತಿಂಗಳೊಳಗೆ ಬಾಕಿ ಮೊತ್ತವನ್ನು ಪಾವತಿಸ ಬೇಕಾಗಿರುತ್ತದೆ. ತಪ್ಪಿದಲ್ಲಿ ಬಾಕಿ ಮೊತ್ತವನ್ನು ವಿದ್ಯುತ್ ಸ್ಥಾವರವಿದ್ದ ಸ್ವತ್ತಿನ ಮೇಲೆ ಋಣಭಾರವನ್ನು ಸೇರಿಸಲು ಕರ್ನಾಟಕ ನಿಯಂತ್ರಣ ಆಯೋಗ ಹೊರಡಿಸಿರುವ ವಿದ್ಯುತ್ ವಿತರಣಾ ಮತ್ತು ಸರಬರಾಜು ನಿಯಮದಂತೆ ನಮೂನೆ-ಸಿ ಯನ್ನು ತಾಲ್ಲೋಕು ಕಛೇರಿಗೆ ಸಲ್ಲಿಸಲಾಗುತ್ತದೆ. ನಮೂನೆ-ಸಿ ಯನ್ನು ಕರ್ನಾಟಕ ನಿಯಂತ್ರಣ ಆಯೋಗ ಹೊರಡಿಸಿರುವ ವಿದ್ಯುತ್ ವಿತರಣಾ ಮತ್ತು ಸರಬರಾಜು ನಿಯಮದಂತೆ ಸ್ಥಾವರವಿದ್ದ ಸ್ವತ್ತಿನ ಮೇಲೆ ವಿದ್ಯುತ್ ಬಾಕಿಯನ್ನು ಋಣಭಾರವನ್ನಾಗಿ ಸೇರಿಸುತ್ತಿದ್ದು, ಸದ್ಯ ಸದರಿ ಸ್ವತ್ತಿನ ಮಾಲೀಕರು ನೀವಾಗಿದ್ದು ಈ ಪತ್ರ ತಲುಪಿದ 15 ದಿನಗಳ ಒಳಗಾಗಿ ಬಾಕಿ ಮೊತ್ತವನ್ನು ಪಾವತಿಸುವುದು ತಪ್ಪಿದರೆ, ತಮ್ಮದೇ ಆದ ಮತ್ತೊಂದು ವಿದ್ಯುತ್ ಸ್ಥಾವರ ಸಂಖ್ಯೆ KNRL-5333 ಸ್ಥಾವರಕ್ಕೆ KNRLBJL-1164 ರ ಬಾಕಿಯನ್ನು ವರ್ಗಾಹಿಸಲಾಗುವುದು ಅಥವಾ KNRLBJL-1164 ಸ್ಥಾವರವಿದ್ದ ಸ್ವತ್ತಿನ ಮೇಲೆ ಋಣಭಾರವನ್ನು ವಿಧಿಸಲು ನಮೂನೆ-ಸಿ ಯನ್ನು ಮಾನ್ಯ ತಹಶೀಲ್ದಾರ್, ಕೆ.ಆರ್.ಪೇಟೆ ಇವರಿಗೆ ಸಲ್ಲಿಸಲಾಗುವುದು ಎಂದು ತಮ್ಮ ಆದ್ಯ ಗಮನಕ್ಕೆ ತರಬಯಸುತ್ತೇನೆ.

(ಎಸ್.ಪಿ ಕೃಷ್ಣ)
ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ& ಪಾಲನಾ ಉಪವಿಭಾಗ-02
ಸೆಸ್ಕ್, ಕೆ.ಆರ್.ಪೇಟೆ.

**ಪ್ರತಿಗಳು:**
1.ಕಾರ್ಯನಿರ್ವಾಹಕಇಂಜಿನಿಯರ್(ವಿ), ಕಾ&ಪಾ ವಿಭಾಗ, ಕೆ.ಆರ್.ಪೇಟೆರವರ ಅವಗಾಹನೆಗೆ ಸಲ್ಲಿಸಲಾಗಿದೆ.
2.ಕಛೇರಿ ಪ್ರತಿ.

Scanned with OKEN Scanner

**Chamundeshwari Electricity Supply Corporation Ltd** **DRAFT**

(A Government of Karnataka undertaking)

Sub-division Office,KR PET-2 CESC

Company Identity Number(CIN) : U40109KA2004SGC035177

Website: www.cescmysore.org

E-Mail ID:

ಕ್ರಮಾಂಕ:ಸೆಸ್ಕ್/ಸಕಾನಿಇ(ವಿ)/ಹಿ.ಸ/ ದಿನಾಂಕ: **29-Jun-2022**

ಲಗತ್ತು:

<u>**ಕರಾರು ಪತ್ರ ರದ್ದುಪಡಿಸುವ ನೋಟಿಸ್**</u>

ಗೆ,

ಶ್ರೀಮತಿ/ಶ್ರೀ. **HOSAMANE BOREGOWDA** ಜಕಾತಿ/ಸ್ವರೂಪ: **LT1**

**KALE GOWDA,0** ಮಾಪಕ ಓದುಗ/ರೀಡಿಂಗ್ ದಿನಾಂಕ: **1342202 / 1**

ಮಾನ್ಯರೆ.

ವಿಷಯ: ನಿಮ್ಮ **AYLBJL160** ನೇ ನಂಬರಿನ ಸ್ಥಾವರಕ್ಕೆ ಮೂರು ತಿಂಗಳು ಕರಾರು ಪತ್ರ ರದ್ದು ಪಡಿಸುವ ಹಾಗೂ ಉಪಯೋಗಿಸಿರುವ ನಿಗಮದ ಕಂಬ, ತಂತಿಗಳನ್ನು ತೆಗೆಯುವ ಬಗ್ಗೆ ತಿಳುವಳಿಕೆ ನೀಡುವ ಪತ್ರ.

*****************

ಈ ಮೂಲಕ ತಮಗೆ ತಿಳಿಸುವುದೇನೆಂದರೆ ಮೇಲೆ ತಿಳಿಸಿರುವ ನಿಮ್ಮ ಸ್ಥಾವರಕ್ಕೆ **4369.00** ರೂ.ಗಳ ಬಾಕಿಯನ್ನು ಪಾವತಿ ಮಾಡದೆ ಇದ್ದುದರಿಂದ ದಿನಾಂಕ **01-MAR-2022** ರಿಂದ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸುವುದು ಸರಿಯಷ್ಟೆ. ಆದ್ದರಿಂದ ಈ ಪತ್ರದ ತಾರೀಖಿನಿಂದ ಮೂರು ತಿಂಗಳೊಳಗೆ ಬಾಕಿ ಇರುವ ಹಣವನ್ನು ಪಾವತಿ ಮಾಡಿ ವಿದ್ಯುಚ್ಛಕ್ತಿಯ ಪುನರ್ ಸಂಪರ್ಕ ಪಡೆಯಬಹುದು.

ತಪ್ಪಿದಲ್ಲಿ ವಿದ್ಯುಚ್ಛಕ್ತಿ ಸರಬರಾಜು ನಿಯಮಗಳು 32.07, 32.08 ಮತ್ತು ಕರಾರು ಪತ್ರದ ಪ್ಯಾರಾ ಉ ಮತ್ತು ಊ ರ ಪ್ರಕಾರ ನೀವು ನಿಗಮಕ್ಕೆ ಮಾಡಿಕೊಟ್ಟಿರುವ ಕರಾರು ಪತ್ರದ ಪ್ರಕಾರ ಉಳಿದಿರುವ ಅವಧಿಯ ಕನಿಷ್ಠ/ಲೈನ್ ಮಿನಿಮಮ್ಮ ಇತ್ಯಾದಿ ಛಾರ್ಜುಗಳನ್ನು ಮೇಲೆ ತಿಳಿಸಿದ ಬಾಕಿ ಜೊತೆಗೆ ಪಾವತಿಸಬೇಕಾಗುತ್ತದೆ. ಅಲ್ಲದೆ ನಿಮ್ಮ ಕರಾರು ಪತ್ರವನ್ನು ರದ್ದು ಮಾಡಲಾಗುವುದು ಅಲ್ಲದೆ ಕರಾರು ಪತ್ರವನ್ನು ರದ್ದು ಮಾಡಿದ ಮೇಲೆ ತಮ್ಮ ಮೇಲ್ಕಂಡ ಸ್ಥಾವರಕ್ಕೆ ಪುನ: ವಿದ್ಯುಚ್ಛಕ್ತಿ ಸಂಪರ್ಕ ಮಾಡಲಾಗುವುದಿಲ್ಲ. ಹಾಗೇನಾದರೂ ತಮಗೆ ಬೇಕಾದಲ್ಲಿ ಹೊಸ ಸ್ಥಾವರಕ್ಕೆ ಬೇಕಾದ ಎಲ್ಲಾ ವಿಧಿವಿಧಾನಗಳನ್ನು ಪಾಲಿಸಬೇಕಾಗುತ್ತದೆ ಮತ್ತು ನಿಮ್ಮ ಸ್ಥಾವರಕ್ಕೆ ಉಪಯೋಗಿಸಿರುವ ನಿಗಮದ ಕಂಬ, ತಂತಿ ಇತ್ಯಾದಿ ಸಾಮಾಗ್ರಿಗಳನ್ನು ಪುನ: ಯಾವುದೇ ಮುನ್ಸೂಚನೆ ಇಲ್ಲದೆ ತೆಗೆಯಲಾಗುವುದು.ನೀವು ಪಾವತಿ ಮಾಡಬೇಕಾದ ಬಾಕಿ ಮೊತ್ತದ ಮೇಲೆ ಹಣವನ್ನು ನಿಗಮಕ್ಕೆ ಸಂದಾಯ ಮಾಡುವವರಗೆ ಸಾಲಿಯಾನ ಶೇಕಡ 12 ರಂತೆ ಬಡ್ಡಿಯನ್ನು ಸಹ ವಿದಿಸಲಾಗುವುದು. ಈ ರೀತಿ ಉಳಿದಿರುವ ಒಟ್ಟು ವಿದ್ಯುಚ್ಛಕ್ತಿ ಬಾಕಿಯನ್ನು ನ್ಯಾಯಾಲಯ ಮೂಲಕ ಚಾ.ವಿ.ಸ.ನಿ.ನಿ (ಬಾಕಿಗಳ ವಸೂಲಿ) ಅಧಿನಿಯಮ 1976 ರ ಪ್ರಕಾರ ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು. ಇದನ್ನು ಅಂತಿಮ ಸೂಚನಾ ಪತ್ರವೆಂದು ತಿಳಿಯತಕ್ಕದ್ದು.

ತಮ್ಮ ವಿಶ್ವಾಸಿ,

**Assistant Executive Engineer (E) , Operation**
**and Mantainence Subdivision,**
**KR PET-2**

ನಕಲನ್ನು ಶಾಖಾಧಿಕಾರಿ **KR PET-2** ಶಾಖೆ ಇವರಿಗೆ ಮುಂದಿನ ಮಾಹಿತಿಗಾಗಿ ರವಾನಿಸಲಾಗಿದೆ.
ಮೂರು ತಿಂಗಳ ನಂತರ ನಿಗಮದ ಸಾಮಾಗ್ರಿಗಳನ್ನು ಸೂಕ್ತ ಕ್ರಮ ತೆಗೆದುಕೊಳ್ಳುವುದು. ಈ ಬಗ್ಗೆ ಬೇಕಾಗುವ ಮಾಹಿತಿಯನ್ನು ಕಂದಾಯ ಶಾಖೆಯಿಂದ ಪಡೆಯತಕ್ಕದ್ದು ಅಲ್ಲದೆ ಮೇಲ್ಕಂಡ ವಿಷಯವನ್ನು ಬಳಕೆದಾರರಿಗೆ ಖುದ್ದಾಗಿ ವಿವರಿಸಬೇಕಾಗಿ ಕೋರಿದೆ.

ಕಟ್ಟಿತ್ತಾರೆ

Scanned with OKEN Scanner